# ಮೊದಲ ರಾಕೆಟ್ ಉಡಾವಣೆ ನೆನಪು

ಇಸ್ರೋ ವಿಜ್ಞಾನಿಗಳು ಉಡಾವಣೆ ಮಾಡಲು ಮೊದಲು ರಾಕೆಟ್ ಹೊತ್ತು ತಂದಿದ್ದು ಸೈಕಲ್‌ನಲ್ಲಿ! ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ವಿವೇಕಾನಂದ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ 'ಕನಸು' ಸ್ಪರ್ಧೆ ಆಯೋಜಿಸಿದ್ದ ಸಂದರ್ಭದಲ್ಲಿ ಮೊದಲ ರಾಕೆಟ್ ಉಡಾವಣೆ ಕುರಿತ ಮಾದರಿಯನ್ನು ತಯಾರಿಸುವ ಮೂಲಕ ಆ ನೆನಪನ್ನು ಹಸಿರಾಗಿಸಿದರು.

■ ಸೀಮಾ ಪೋನಡ್ಕ, ಪುತ್ತೂರು





# ಓತಿಕ್ಯಾತಗಳ ಮುದ್ದಾಟ!

ಎರಡು ಓತಿಕ್ಯಾತಗಳು ಪ್ರಣಯಪೂರ್ವ ಮುದ್ದಾಟಕ್ಕೆ ಅಣಿಯಾಗುತ್ತಿವೆ. ಪರಸ್ಪರ ಓತಿಗಳ ಮುಖಗಳು ಕೂಡಿವೆ. ಜೊತೆಗೆ ಅವುಗಳ ಬಾಲಗಳೂ ಕೂಡಲು ಹವಣಿಸುತ್ತಿವೆ. ಇಡೀ ದೃಶ್ಯ ಪ್ರೀತಿಪ್ರೇಮಗಳ ದ್ಯೋತಕವಾದ ಹೃದಯದ ಚಿನ್ಹೆಯನ್ನು ಸೃಷ್ಟಿಸಿದೆ. ಈ ಅಪರೂಪದ ಚಿತ್ರಣ ನೋಡುಗರ ಮನಸ್ಸನ್ನು ಪುಳಕಗೊಳಿಸುತ್ತದೆ. ನಿಸರ್ಗದಲ್ಲಿ ಇಂಥ ಅಪರೂಪದ ನೋಟಗಳು ತೆರೆದುಕೊಳ್ಳುತ್ತಲೇ ಇರುತ್ತವೆ. ನಾವು ಕಣ್ಣು ತೆರೆದು ನೋಡಬೇಕು ಅಷ್ಟೇ. ಈ ಅಪರೂಪದ ದೃಶ್ಯ ಕಂಡು ಬಂದಿದ್ದು ನಮ್ಮ ಮನೆಯ ಬಳಿ.

■ ಸುಭಾಸ ಯಾದವಾಡ, ವಿಜಯಪುರ

# ವರ್ಣಮಯ ಪಗಡೆ ಹಾಸು

ಇತ್ತೀಚೆಗೆ ನನ್ನ ದೊಡ್ಡಮ್ಮನ ಮನೆಗೆ ಹೋಗಿದ್ದಾಗ, ಅವರಿಟ್ಟುಕೊಂಡು ಆಡುತ್ತಿದ್ದ ಆರೇಳು ದಶಕಗಳಷ್ಟು ಹಿಂದಿನ ಸುಂದರ ಪಗಡೆ ಹಾಸು ಗಮನ ಸೆಳೆಯಿತು. ಹಳ್ಳಿಯಲ್ಲಿದ್ದಾಗ ದೊಡ್ಡಮ್ಮ ಸ್ವತಃ ತಯಾರಿಸಿದ ಈ ವರ್ಣಮಯ ಹಾಸು ಇಂದಿಗೂ ತನ್ನ ಆಕರ್ಷಣೆಯನ್ನು ಉಳಿಸಿಕೊಂಡು ಬಂದಿದೆ. ಕಾಯಿಗಳು ಮತ್ತು ದಾಳಗಳನ್ನು ಜೋಪಾನವಾಗಿರಿಸಲು ಹಿಂಬದಿಯಲ್ಲಿ ಅಡಕಗೊಳಿಸಿರುವ ಸಣ್ಣ ಸಂಚಿ ಈ ಹಾಸಿನ ಅವಿಭಾಜ್ಯ ಅಂಗವಾಗಿದೆ. ಹಾಸು ಹಳೆಯದಾಗಿದೆ; ಕಾಯಿಗಳ ಹೊಳಪು ಕಡಿಮೆಯಾಗಿದೆ; ದಾಳಗಳು ಸವೆದಿವೆ. ಇವೆಲ್ಲದರ ಹೊರತಾಗಿಯೂ ಪಗಡೆಯಾಡುವ ಆಸಕ್ತಿ ಮಾತ್ರ ಅಚಲವಾಗಿದೆ.

■ ಮಂಜುನಾಥ ಡಿ.ಎಸ್., ಬೆಂಗಳೂರು

